# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 28.06.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.64ರ ವ್ಯಾಪ್ತಿಯಲ್ಲಿ ಬರುವ ಸ್ವತ್ತಿನ ಸಂಖ್ಯೆ: 2, 11ನೇ 'ಎ' ಅಡ್ಡರಸ್ತೆ, ವೈಯಾಲಿಕಾವಲ್, ಬೆಂಗಳೂರು ಇದರ ಷೆಡ್ಯೂಲ್:- (ನೆಲ ಹಾಗೂ 1ನೇ ಅಂತಸ್ತು) ಉತ್ತರ : ಖಾಸಗಿ ಸ್ವತ್ತು, ದಕ್ಷಿಣ : ಬಿ.ಬಿ.ಎಂ.ಪಿ. ಸ್ವತ್ತು, ಪೂರ್ವ : ಖಾಸಗಿ ಸ್ವತ್ತು, ಪಶ್ಚಿಮ : ರಸ್ತೆ, ಅಳತೆ 58 X 58 ಚದರ ಅಡಿಗಳ ನಗರ ಪಾಲಿಕೆ ಸ್ವತ್ತನ್ನು ಕಾರ್ಯದರ್ಶಿ ವಿನಾಯಕ ಹೌಸಿಂಗ್ ಸೊಸೈಟಿ ರವರಿಗೆ ವಾರ್ಷಿಕ ರೂ.500/- ಗಳಂತೆ 30 ವರ್ಷಗಳ ಗುತ್ತಿಗೆಗೆ ನೀಡಿದ್ದು, ಗುತ್ತಿಗೆ ಅವಧಿ ದಿನಾಂಕ: 26.08.2006 ಕ್ಕೆ ಮುಗಿದಿರುವುದರಿಂದ ಕೆ.ಪಿ.ಪಿ. ಕಾಯ್ದೆ ನಿಯಮ 4 (1) ಮತ್ತು 5 (1) ರ ಅನ್ವಯ ನೋಟೀಸ್ ಜಾರಿ ಮಾಡಿದ್ದು, 45 ದಿನಗಳು ಆಗಿರುತ್ತದೆ.

ಆದ್ದರಿಂದ ಕೆ.ಪಿ.ಪಿ. ಕಾಯ್ದೆ ಅನ್ವಯ ಪಾಲಿಕೆಯ ವಶಕ್ಕೆ ತೆಗೆದುಕೊಳ್ಳಲು ಆಯುಕ್ತರವರು ಆದೇಶಿಸಿರುವಂತೆ, ದಿನಾಂಕ: 28.06.2011 ರಂದು ಸದರಿ ವಿನಾಯಕ ಹೌಸಿಂಗ್ ಸೊಸೈಟಿ ಕಟ್ಟಡದಲ್ಲಿ ಇಡಲಾಗಿರುವ ಕಡತಗಳು ಹಾಗೂ ವಸ್ತುಗಳನ್ನು ಆರಕ್ಷಕರು ವೈಯಾಲಿಕಾವಲ್, ಪೋಲೀಸ್ ಠಾಣೆ ಸಿಬ್ಬಂದಿ, ನಗರ ಪಾಲಿಕೆ ಕಂದಾಯ ಅಧಿಕಾರಿ (ಮಲ್ಲೇಶ್ವರಂ), ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಮಲ್ಲೇಶ್ವರಂ), ಸಹ ಕಂದಾಯ ಅಧಿಕಾರಿ (ಮಲ್ಲೇಶ್ವರಂ) ಹಾಗೂ ಸ.ಕ.ಅ. (ಮಲ್ಲೇಶ್ವರಂ) ಕಾರ್ಯನಿರ್ವಾಹಕ ಸಿಬ್ಬಂದಿ ಸಮಕ್ಷಮದಲ್ಲಿ ಪಂಚನಾಮೆ ಮಾಡಿ ಪಟ್ಟಿಯನ್ನು ಮಾಡಿದ್ದು, ಇದರಂತೆ ಸದರಿ ಕಟ್ಟಡದ ಬಾಗಿಲಿಗೆ ಸೀಲ್ ಅನ್ನು ಮಾಡಿ ನಗರ ಪಾಲಿಕೆ ವಶಕ್ಕೆ ತೆಗೆದುಕೊಳ್ಳಲಾಗಿರುತ್ತದೆ ಎಂದು ಸಹಾಯಕ ಕಂದಾಯ ಅಧಿಕಾರಿ (ಮಲ್ಲೇಶ್ವರಂ) ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 28.06.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಡಾ॥ ರಾಜ್‌ಕುಮಾರ್ ವಾರ್ಡ್ ನಂ.106 ರಲ್ಲಿ ರಾಜಾಜಿನಗರ ಕೈಗಾರಿಕಾ ಪ್ರದೇಶದಲ್ಲಿ ಹರಿಯುವ ವಿ-116 ವೃಷಭಾವತಿ ಕಣಿವೆಯ ಉಪಕಾಲುವೆಯ ಪಕ್ಕದಲ್ಲಿ ಒತ್ತುವರಿ ಮಾಡಿ ನಿರ್ಮಾಣಗೊಂಡಿದ್ದ (1) #ಎ-30/6, 4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ ಇವರು ನಿರ್ಮಿಸಿದ್ದ ಒಂದು ರೂಮ್ 5 ಮೀ X 4 ಮೀ. (2) ಎ-29, 3ಮೀ. ಎತ್ತರ ಹಾಗೂ 20 ಮೀ. ಉದ್ದದ ಕಾಂಪೌಂಡ್ ಹಾಗೂ ಚಿಕ್ಕ ರೂಮ್, (3) ಎ-28, 3ಮೀ. ಎತ್ತರದ ಹಾಗೂ 20 ಮೀ. ಉದ್ದದ ಕಾಂಪೌಂಡ್ ಗೋಡೆಯನ್ನು ಹಾಗೂ (4) ಬಸವೇಶ್ವರನಗರದ ಮುಖ್ಯರಸ್ತೆಯಲ್ಲಿರುವ ಮಳೆ ನೀರು ಚರಂಡಿಯ ಮೇಲಿದ್ದ 2 ಪೆಟ್ಟಿಗೆ ಅಂಗಡಿಗಳನ್ನು ದಿನಾಂಕ: 28.06.2011 ರಂದು ತೆರವುಗೊಳಿಸಲಾಗಿದೆ.

ಒತ್ತುವರಿ ಕಟ್ಟಡಗಳನ್ನು ಜೆ.ಸಿ.ಬಿ. ಯಂತ್ರದಿಂದ ತೆರವುಗೊಳಿಸಲಾಗಿರುತ್ತದೆ. ಒಟ್ಟು 133.20 ಚದರ ಮೀಟರ್ (1433.23 ಚದರ ಅಡಿಗಳು) ಜಾಗವನ್ನು ಪಾಲಿಕೆ ವಶಕ್ಕೆ ತೆಗೆದುಕೊಳ್ಳಲಾಗಿರುತ್ತದೆ. ಇದರ ಮೌಲ್ಯ ಸುಮಾರು ರೂ.75.00 ಲಕ್ಷಗಳಾಗಿರುತ್ತದೆ ಎಂದು ಮುಖ್ಯ ಅಭಿಯಂತರರು (ಬೃಹತ್ ನೀರುಗಾಲುವೆ) ವಿಭಾಗ, ವೃಷಭಾವತಿ ಕಣಿವೆ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**